ಕರ್ನಾಟಕ ವಿಧಾನಸಭೆ

ಮಂಗಳವಾರ 23ನೇ ಫೆಬ್ರವರಿ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ. ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶಾಸಕ ಶ್ರೀ ಬಿ.ಎಸ್. ಯಡಿಯೂರಪ್ಪನವರ ಬಂಧನ.

†ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯಘಟಕದ ಅಧ್ಯಕ್ಷರಾದ ಯಡಿಯೂರಪ್ಪನವರನ್ನು ಮತ್ತು ಇತರೆ ಶಾಸಕರನ್ನೆಲ್ಲಾ ಬಂಧಿಸಿ ಇವತ್ತು ಜೈಲಿನಲ್ಲಿ ಹಾಕಿದ್ದಾರೆ.

ಅಧ್ಯಕ್ಷರು:– ಈಗ ಪ್ರಶ್ನೋತ್ತರ ವೇಳೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಬೇಕೆಂಬ ಇಚ್ಛೆ ನಮಗೆ ಇದೆ. ಇಲ್ಲಿ ವಿರೋಧಪಕ್ಷವಾಗಿ ಕೆಲಸ ಮಾಡುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಈ ಸರ್ಕಾರಕ್ಕೆ ವಿರೋಧ ಪಕ್ಷಗಳು ಕೆಲಸ ಮಾಡಬೇಕು ಎನ್ನುವ ಅಪೇಕ್ಷೆ ಇಲ್ಲವೋ ಏನೋ ?

ಅಧ್ಯಕ್ಷರು:– ಪ್ರಶ್ನೋತ್ತರ ವೇಳೆ .....

† ಶ್ರೀ ಆರ್.ವಿ. ದೇಶಪಾಂಡೆ:– ನಾವು ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ ಎಂ.ಎಲ್.ಎ.ಗಳನ್ನು ಅಧಿವೇಶನ ನಡೆಯುವಾಗ ತಾವು ಅರೆಸ್ಟ್ ಮಾಡಿರುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ರ್ಯಾಲಿ ಮಾಡುವುದಕ್ಕೆ ನಮ್ಮ ದೃಷ್ಟಿಯಿಂದ ಕೇಂದ್ರ ಸರ್ಕಾರ ಅದಕ್ಕೆ ಪರ್ಮಿಷನ್ ಕೊಡಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ಯಾರೇ ರ್ಯಾಲಿ ಮಾಡಬೇಕಾದರೂ ಪೀಸ್‌ಫುಲ್ ಆಗಿ ಮಾಡಬಹುದು. ಅದು ಅವರಿಗೆ ಅಧಿಕಾರ ಇದೆ. ಆ ಅಧಿಕಾರವನ್ನು ಯಾರು ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ನಿಮ್ಮ ಕೇಂದ್ರ ಸರ್ಕಾರದವರು ಆ ಅಧಿಕಾರವನ್ನು ಕಸಿದುಕೊಂಡಿದ್ದಾರೆ. ಏತಕ್ಕೆ ಕಸಿದುಕೊಂಡಿದ್ದಾರೆ, ಏತಕ್ಕೆ ಆ ರೀತಿ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಅಧಿವೇಶನ ನಡೆಯುವಾಗ ಎಂ.ಎಲ್.ಎ.ಗಳನ್ನು ಅರೆಸ್ಟ್ ಮಾಡಿ ಇಟ್ಟುಕೊಳ್ಳುವುದು ಸರಿಯಲ್ಲ. ಇಲ್ಲಿ ಯಾವ ಪಕ್ಷದವರೇ ಇರಲಿ. ಪ್ರಜಾಪ್ರಭುತ್ವದಲ್ಲಿ ಫ್ರೀಯಾಗಿ ಮಾತನಾಡುವುದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಇರಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಇದು ಸರಿಯಲ್ಲ. ಇಮ್ಮಿಡಿಯೇಟ್ ಆಗಿ ಅವರನ್ನು ರಿಲೀಸ್ ಮಾಡಿ. ಅವರು ಇಲ್ಲಿ ಪಾರ್ಟಿಸಿಪೇಟ್ ಮಾಡಲಿ. ಈ ಸರ್ಕಾರ ಏನು ಕೆಲಸವನ್ನು ಮಾಡಿದೆ, ಅದು ಸರಿಯಲ್ಲ ಎಂದು ನಾನು ಖಂಡನೆ ಮಾಡುತ್ತೇನೆ.

† ಶ್ರೀ ವಾಟಾಳ್ ನಾಗರಾಜ್:– ಈ ತುರ್ತುಪರಿಸ್ಥಿತಿಯನ್ನು ಗಮನಕ್ಕೆ ತರುತ್ತಿದೆ. ಅಧ್ಯಕ್ಷರು ನಮಗೆ ರಕ್ಷಣೆಯನ್ನು ಕೊಡಬೇಕಾದವರು. ಶಾಸಕರುಗಳಿಗೆ ರಕ್ಷಣೆಯನ್ನು ಕೊಡಬೇಕಾದವರು ತಾವು.

ಅಧ್ಯಕ್ಷರು:– ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಈ ಶಾಸನಸಭೆ ನಡೆಯುವಾಗ ತಾವು ಈ ಬಗ್ಗೆ ಗಮನ ಹರಿಸಬೇಕು. ನಿನ್ನೆ ದಿವಸ ಯಡಿಯೂರಪ್ಪನವರು ಈ ಸದನದಲ್ಲಿ ಇದ್ದರು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡಿಸುವಾಗ ಬಹಳ ಸಂತೋಷದಿಂದ ಇದ್ದರು. ಆದರೆ ಇವತ್ತಿನ ದಿನ ಇದ್ದಕ್ಕಿದ್ದ ಹಾಗೆ ಏಕಾಏಕಿಯಾಗಿ ಅವರನ್ನು ಬಂಧಿಸಿರತಕ್ಕಂಥದ್ದು ಯಾವ ನೀತಿ ಎಂದು ದಯಮಾಡಿ ಹೇಳಬೇಕು.

ಅಧ್ಯಕ್ಷರು:– ನಾನು ಅದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು:– ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಬಂಧನ ಏತಕ್ಕೆ, ಯಾವ ಉದ್ದೇಶಕ್ಕೋಸ್ಕರ ಬಂಧಿಸಿದ್ದಾರೆ ಎಂಬುದನ್ನು ಸದನಕ್ಕೆ ತಾವು ತಿಳಿಸಬೇಕು. ನಮಗೆ ಇದು ಗೊತ್ತಾಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಅವರು ಪೋಲೀಸ್ ವ್ಯಾನ್‌ನಲ್ಲಿ ಹೋಗುತ್ತಿರುವುದನ್ನು ನೋಡಿದ ಮೇಲೆ ಗೊತ್ತಾಯಿತು. ಈ ಬಂಧನದ ಉದ್ದೇಶ ಏನು? ದೆಹಲಿಯಲ್ಲಿ ಯಾವುದೋ ಮೇಳ ಮಾಡಿದರೆ, ಆ ಮೇಳವನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ಈ ದೇಶಕ್ಕೆ ಒಂದು ರೀತಿಯ ಅಪಚಾರ ಮಾಡಿದೆ., ಇದನ್ನು ಯಾರೂ ಒಪ್ಪುತ್ತಿಲ್ಲ. ಯಾವ ಪಕ್ಷದವರೂ ಸಹ ಈ ಮೇಳವನ್ನು ಸಹ ರದ್ದು ಮಾಡಬೇಕೆಂದು ಒಪ್ಪುತ್ತಿಲ್ಲ. ರಾಜ್ಯ ಸರ್ಕಾರಕ್ಕೆ ಯಾವ ನೀತಿ ಇದೆ, ಶಾಸನಸಭೆ ನಡೆಯುವಾಗ ಶಾಸಕರು ಬಂದು, ಈ ಪ್ರಜಾಪ್ರಭುತ್ವದ ಮನೆಯಲ್ಲಿ ಮಾತನಾಡತಕ್ಕ ಅವಕಾಶ ಇಲ್ಲ ಎನ್ನುವುದಾದರೆ ಹೇಗೆ?

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನಿಮಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿದ್ದೇನೆ. ಈಗ ಪ್ರಶ್ನೋತ್ತರ ಸಮಯ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಪ್ರಶ್ನೋತ್ತರ ಸಮಯವನ್ನು ಬದಿಗೊತ್ತಿ. ದಯವಿಟ್ಟು ವಿರೋಧ ಪಕ್ಷದ ನಾಯಕರ ಗಮನಕ್ಕಾದರೂ ... ಪ್ರಶ್ನೋತ್ತರ ಸಮಯ ಬೇಡ ಅಂತ ಹೇಳುವುದಿಲ್ಲ. ಆದರೆ ಒಬ್ಬ ವಿರೋಧ ಪಕ್ಷದವರನ್ನು ಈ ರೀತಿ .....

ಅಧ್ಯಕ್ಷರು:– ಇದಾದ ತಕ್ಷಣ ಸಮಯ ಕೊಡುತ್ತೇನೆ.

ಸಂತಾಪ ಸೂಚನೆ ನಿರ್ಣಯ

ಅಧ್ಯಕ್ಷರು:– ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಹಾಗೂ ಗಡಿನಾಡಿನ ಕನ್ನಡದ ದೀಪ ಡಾ।। ಶ್ರೀ ಮುಗುಳಿಯವರು ದಿನಾಂಕ: 20–2–1993ರಂದು ನಿಧನ ಹೊಂದಿದರು. ಕನ್ನಡ ಸಾಹಿತ್ಯ ಲೋಕದ ರಸಿಕರೆಂದು ಖ್ಯಾತರಾಗಿದ್ದ ಡಾ।। ಮುಗುಳಿಯವರು ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಸಾಹಿತ್ಯ ಚರಿತ್ರೆಗಳಲ್ಲಿ ವೈವಿಧ್ಯಮಯ ಸೇವೆಯನ್ನು ಸಲ್ಲಿಸಿ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಶಿಲ್ಪಿಯಾಗಿ ಕನ್ನಡನಾಡನ್ನು ಶ್ರೀಮಂತಗೊಳಿಸಿರುತ್ತಾರೆ. ಕನ್ನಡ ಮತ್ತು ಮರಾಠಿ ಭಾಷೆ ಸಾಹಿತ್ಯಗಳ ಸ್ನೇಹಸೇತುವೆಯಾಗಿ ಸುಮಧುರ ಬಾಂಧವ್ಯವನ್ನು ಬೆಳೆಸಿದರಲ್ಲದೆ ಶಿಕ್ಷಣ ರಂಗದಲ್ಲಿಯೂ ಸಹ ಅಮೋಘವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಸ್ವಾತಂತ್ರ್ಯ ಚಳುವಳಿ ಹಾಗೂ ಮಹಾತ್ಮಾ ಗಾಂಧಿಯವರು ಕರೆ ನೀಡಿದ್ದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಈ ದೇಶಪ್ರೇಮಿಯ ಹಿರಿಮೆಗಾಗಿ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು, ವಿಶ್ವವಿದ್ಯಾನಿಲಯದವರು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. 1963ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಕೀರ್ತಿ ಶ್ರೇಯುತರಿಗೆ ಸಲ್ಲುತ್ತದೆ.

ಶ್ರೇಯುತರ ಗೌರವಾರ್ಥ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.